www.ecourtsindia.com

**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,**
**ಭದ್ರಾವತಿ**

**ಸಿ.ಸಿ.ನಂ.6131/2022**

ಪಿರ್ಯಾದಿಃ ಚಿಕ್ಕಣ್ಣ ಹೆಚ್.

**ವಿರುದ್ಧ**

ಆರೋಪಿಃ ಜೆ ಸೆಲ್ವ ಕುಮಾರ್.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅನ್ವಯ ಮಾಡಿಕೊಳ್ಳಬೇಕಾದ ಆರೋಪಿಯ ವಿಚಾರಣೆ**

ಪ್ರಶ್ನೆ.1. ನೀವು ಪಿರ್ಯಾದುದಾರರು ಪಿ.ಡಬ್ಲ್ಯೂ-1 ರಂತೆ ನುಡಿದಿರುವ ಇವರ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ.2. ಪ್ರಾಸಾ-1 ಚಿಕ್ಕಣ್ಣ ಹೆಚ್ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 07.06.2022 ರಂದು ನಿಮ್ಮ ಗೃಹ ಕೃತ್ಯ ಹಾಗೂ ವ್ಯವಹಾರ ತೊಂದರೆ ಸಲುವಾಗಿ ರೂ.2,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿದ್ದು ಸದರಿ ಸಾಲದ ಮರುಪಾವತಿಗಾಗಿ ಕೆನರಾ ಬ್ಯಾಂಕ್ ಬಿ ಹೆಚ್ ರಸ್ತೆ ಶಾಖೆಯ ಚೆಕ್ ನಂ.481858 ನ್ನು ದಿನಾಂಕ 07.09.2022 ರಂದು ನಮೂದಿಸಿ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿಯವರು ದಿನಾಂಕ 08.09.2022 ರಂದು ನಗದೀಕರಣಕ್ಕೆಂದು ಬ್ಯಾಂಕ್ ಗೆ ಸಲ್ಲಿಸಿದಾಗ "ಖಾತೆಯಲ್ಲಿ ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹದೊಂದಿಗೆ ಹಿಂದಿರುಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಅದಕ್ಕೆ ಪೂರಕವಾಗಿ ಸದರಿ ಚೆಕ್ ಮತ್ತು ಬ್ಯಾಂಕಿನ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

This is a True Copy of the Court Records Online. Authenticated @ districts.ecourtsindia.com/cnr/KASM310075192022/truecopy/order-1.pdf

ಪ್ರಶ್ನೆ.3. ಪಿರ್ಯಾದಿಯವರು ಸದರಿ ಬ್ಯಾಂಕ್ ನ ಹಿಂಬರಹವನ್ನು ನಿಮ್ಮ ಗಮನಕ್ಕೆ ತಂದು ಚೆಕ್ ಹಣ ಕೋರಿ ನಿಗದಿತ ದಿನದೊಳಗೆ ಅಂದರೆ ದಿನಾಂಕಃ 22.09.2022 ರಂದು ನಿಮಗೆ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ನೋಟಿಸ್ ಕಳುಹಿಸಿದ್ದು, ಸದರಿ ನೋಟೀಸ್ ನಿಮ್ಮ ಸರಿಯಾದ ವಿಳಾಸಕ್ಕೆ ಕಳುಹಿಸಿದ್ದರೂ ದಿನಾಂಕ 30.09.2022 ರಂದು "Intimation Delivered Addressee Continuously Absent Return to Sender" ಎಂದು ನಮೂದಿಸಿ ವಾಪಸ್ಸು ಬಂದಿರುತ್ತದೆ ಹಾಗೂ ನೀವು ಪಿರ್ಯಾದಿಯವರಿಗೆ ಕೊಡಬೇಕಾಗಿದ್ದ ಹಣವನ್ನು ಪಾವತಿ ಮಾಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಅದಕ್ಕೆ ಪೂರಕವಾಗಿ ವಕೀಲರ ನೋಟಿಸಿನ ಪ್ರತಿ, ಅಂಚೆ ರಶೀದಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4 ನಿಮ್ಮ ಪರವಾಗಿ ಸಾಕ್ಷಿ ಪುರಾವೆ ಇವೆಯಾ?
ಉತ್ತರಃ

ಪ್ರಶ್ನೆಃ 5 ನಿಮಗೆ ಈ ಕೇಸಿನಲ್ಲಿ ಏನಾದರೂ ಹೇಳುವುದು ಇದೆಯಾ?
ಉತ್ತರಃ

ಆರೋಪಿಯ ವಿರುದ್ಧ ಲಭ್ಯವಿರುವ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಆತ ನೀಡಿದ ಹೇಳಿಕೆಯನ್ನು ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ . .2024
ಸ್ಥಳಃ ಭದ್ರಾವತಿ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಭದ್ರಾವತಿ .

This is a True Copy of the Court Records Online. Authenticated @ districts.ecourtsindia.com/cnr/KASM310075192022/truecopy/order-1.pdf